ಕರ್ನಾಟಕ ವಿಧಾನಸಭೆ

ಮಂಗಳವಾರ ೩೧ ಜನವರಿ ೨೦೦೧ ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆ ೪೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ಪಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

೧. ಪ್ರಕಟಣೆ

ಅಧ್ಯಕ್ಷರು: ಒಂದು ಪ್ರಕಟಣೆ ಇದೆ. ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ:

''ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ ೧೧೮ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ ೩೦ನೇ ಜುಲೈ, ೨೦೦೧ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಕರ್ನಾಟಕ ಧನ ವಿನಿಯೋಗ (ಸಂಖ್ಯೆ ೨) ವಿಧೇಯಕ, ೨೦೦೧ನ್ನು ಅಂಗೀಕರಿಸಿದೆ''

೨. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು: ಮಾನ್ಯ ಗುರುಪಾದಗೌಡ ಸಂಗನಗೌಡ ಪಾಟೀಲ್ ಅವರೇ, ನಿಮ್ಮ ಪ್ರಶ್ನೆಯನ್ನು ಕೊನೆಗೆ ತೆಗೆದುಕೊಳ್ಳೋಣ. ಮಾನ್ಯ ಮಂತ್ರಿಗಳು ಹೇಳಿ ಹೋಗಿದ್ದಾರೆ.

ನೀರಾವರಿ ಉದ್ದೇಶಕ್ಕೆ ಬಳಕೆಯಾಗುವ ನೀರಿನ ದರ ಪರಿಷ್ಕರಣೆ.

334(3509)

ಶ್ರೀ ಡಿ.ಪಿ.ಸದಾನಂದಗೌಡ (ಪುತ್ತೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀರಾವರಿ ಉದ್ದೇಶಕ್ಕೆ ಬಳಕೆಯಾಗುವ ನೀರಿನ ದರಗಳನ್ನು ಪರಿಷ್ಕರಿಸಲು

ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ ನಿಗಧಿಪಡಿಸಲು ಉದ್ದೇಶಿಸಿರುವ ನೀರಾವರಿ ದರದ ವಿವರಗಳೇನು;

ಇ) ದರ ಪರಿಷ್ಕರಣೆ ಕಾರಣಗಳೇನು?

ಈ) ದರ ವಿಧಿಸಲು ಅನುಸರಿಸಿದ ಮಾನ ದಂಡಗಳೇನು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಸರ್ಕಾರಿ ಆದೇಶದ ಸಂಖ್ಯೆ: ನೀಇ 16 ಎಸ್‌ಪಿಸಿ 99 (ಭಾಗ) ದಿನಾಂಕ:13-7-2000ರನ್ವಯ ನೀರಿನ ದರಗಳನ್ನು ಸರ್ಕಾರವು ಪರಿಷ್ಕರಿಸಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ಇಂದಿನ ಅಂದಾಜಿನ ಪ್ರಕಾರ ಹರಿ ನೀರಾವರಿ ಮತ್ತು ಏತ ನೀರಾವರಿ ಯೋಜನೆಯಡಿ ಆಗುತ್ತಿರುವ ನಿರ್ವಹಣಾ ವೆಚ್ಚದೊಡನೆ ಹೊಂದುವಂತೆ ನೀರಾವರಿ ದರಗಳನ್ನು ನಿಗಧಿಪಡಿಸುವ ವಿಷಯದ ಬಗ್ಗೆ ಕೇಂದ್ರ ಸರ್ಕಾರವು ರಚಿಸಿದ ವೈದ್ಯನಾಥನ್ ಸಮಿತಿಯು 1992ನೇ ಸೆಪ್ಟೆಂಬರ್‌ನಲ್ಲಿ ವರದಿ ನೀಡಿದೆ. ಇದರ ಅನುಸಾರ ನೀರಿನ ಕರವನ್ನು ನಿರ್ವಹಣಾ ವೆಚ್ಚ ಮತ್ತು ಬಂಡವಾಳ ವೆಚ್ಚ ಮೇಲೆ ಶೇ.1ರಷ್ಟು ವಸೂಲಿ ಆಗುವ ಮಟ್ಟಕ್ಕೆ ಪರಿಷ್ಕರಿಸಿ ವಿಧಿಸಬೇಕಾಗುತ್ತದೆ. ವಿಶ್ವಬ್ಯಾಂಕ್, ನಬಾರ್ಡ್ ಮುಂತಾದ ನೆರವು ನೀಡುವ ಸಂಸ್ಥೆಗಳು ಸಹಾ ನೀರಿನ ದರಗಳನ್ನು ನಿರ್ವಹಣಾ ವೆಚ್ಚ ಮತ್ತು ಭಾಗಶಃ ನೀರಾವರಿ ಯೋಜನೆಗಳ ಮೇಲಿನ ಬಂಡವಾಳ ವೆಚ್ಚ ವಸೂಲಿ ಆಗುವ ಮಟ್ಟಕ್ಕೆ ಪರಿಷ್ಕರಿಸಬೇಕೆಂದು ಒತ್ತಾಯಿಸುತ್ತಿವೆ. ಆದಕಾರಣ ನೀರಿನ ದರಗಳನ್ನು ಪರಿಷ್ಕರಿಸುವುದು ಅನಿವಾರ್ಯವಾಗಿದೆ.

ಈ) ಈ ಬಗ್ಗೆ ಪರಿಶೀಲಿಸಿ ನೀರಾವರಿ ದರಗಳ ಪರಿಷ್ಕರಣೆಯ ವಿಚಾರದಲ್ಲಿ ವರದಿ ನೀಡಲು ಸರ್ಕಾರದ ಆದೇಶ ಸಂ:ನೀಇ 1 ಎನ್‌ಪಿಸಿ 93 ದಿನಾಂಕ:7-5-93ರಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಮೊದಲ ಬಾರಿಗೆ ರಚಿಸಲಾಯಿತು. ಆಗಿಂದಾಗ್ಗೆ ಆದ ಬದಲಾವಣೆಗಳನ್ನು ಪರಿಗಣಿಸಿ ಉಪ ಸಮಿತಿಯನ್ನು ಪುನರ ರಚಿಸಲಾಗಿದೆ. ಈ ಸಮಿತಿಯು ದಿನಾಂಕ:24-2-2000, 29-2-2000 ಹಾಗೂ 15-3-2000ರಂದು ಸಭೆ ಸೇರಿ ಸದರಿ ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚೆ ನಡೆಸಿ ಶಿಫಾರಸ್ಸುಗಳನ್ನು ನೀಡಿದೆ. ಉಪ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ನೀರಿನ ದರಗಳನ್ನು ಪರಿಷ್ಕರಿಸಲಾಗಿದೆ.

ವಿಧಾನಸಭೆ ಸದಸ್ಯರಾದ ಶ್ರೀ ಡಿ.ವಿ.ಸದಾನಂದಗೌಡರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3509ಕ್ಕೆ ಅನುಬಂಧ.

ಕ್ರಮ ಸಂಖ್ಯೆ	ಬೆಳೆ	ನೀರಿನ ದರ ಪ್ರತಿ ಹೆಕ್ಟೇರ್‌ಗೆ	ಪ್ರತಿ ಎಕರೆಗೆ
1)	ಕಬ್ಬು	988.45	400
2)	ಭತ್ತ	247.10	100
3)	ಹತ್ತಿ	148.25	60
4)	ತೋಟಗಾರಿಕೆ ಬೆಳೆ	148.25	60
5)	ಗೋಧಿ	148.25	60
6)	ಕಡ್ಲೆಕಾಯಿ	148.25	60
7)	ಸೂರ್ಯಕಾಂತಿ	148.25	60
8)	ಜೋಳ, ಮೆಕ್ಕೆಜೋಳ, ನವಣೆ, ರಾಗಿ ಹಾಗೂ ಅರೆ ಖುಷ್ಕಿಗಳು	86.50	35
9)	ಧಾನ್ಯಗಳು	86.50	35
10)	ತಂಬಾಕು	86.50	35
11)	ಗೊಬ್ಬರದ ಬೆಳೆಗಳು	37.05	15
12)	ಇತರೆ	86.50	35

ಶ್ರೀ ಡಿ.ಎ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ದಿನಾಂಕ 13.7.2000 ದಂದು ನೀರಿನ ದರಗಳನ್ನು ಸರ್ಕಾರವು ಪರಿಷ್ಕರಿಸಿದೆ ಎಂದು ಹೇಳಿದ್ದೀರಿ. ನೀರಿನ ದರ ಪರಿಷ್ಕರಣೆಗೆ ಖಂಡಿತವಾಗಿ ನಮ್ಮ ವಿರೋಧ ಇಲ್ಲ. ನಿನ್ನೆ ತಾನೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ನಾವು ಯಾವುದೇ ಒಂದು ಇನ್‌ವೆಸ್ಟ್‌ಮೆಂಟ್ ಮಾಡುವಾಗ ಕನಿಷ್ಟ ಮೇಂಟೆನೆನ್ಸ್ ಆದರೂ ಬರುವಂತಹದಕ್ಕೆ ವ್ಯವಸ್ಥೆಗಳು ಇರಬೇಕು. ಇಲ್ಲದಿದ್ದರೆ ಯಾವುದೇ ಕೆಲಸಗಳನ್ನು ಮಾಡಲಿಕ್ಕೆ ಕಷ್ಟ ಆಗಬಹುದು. ಆದರೆ ನನಗೆ ತಿಳಿದ ಪ್ರಕಾರ ಸುಮಾರು 1985ನೇ ಇಸವಿಯ ನಂತರ ಯಾವುದೇ ವರ್ಷದಲ್ಲಿ ಕೂಡ ಇದರ ಪರಿಷ್ಕರಣೆ ಮಾಡಲಿಲ್ಲ. ಬಹುಶಃ ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಗಳಿಗೆ ಒಮ್ಮೆ ಹಂತ ಹಂತವಾಗಿ ಇದರ ಪರಿಷ್ಕರಣೆ ಮಾಡಿದರೆ ಅದು ಏಕಾಏಕಿ ಪರಿಷ್ಕರಣೆ ಎಂದು ಆಗುವುದಿಲ್ಲ. ಪ್ರಾಯಶಃ ಈಗ 13.7.2000ರನ್ವಯ ನೀರಿನ ದರ ಪರಿಷ್ಕರಣೆ ಮಾಡಿದೆ ಎಂದು ಹೇಳಿದೆ. ಇದು ಒಮ್ಮೆಲೇ ಪರಿಷ್ಕರಣೆ ಮಾಡುತ್ತಿರುವುದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಏಕೆ ಈ ರೀತಿ ಮಾಡಲಾಗಿದೆ? ಯಾವುದಾದರೂ ಒಂದು ಹಂತ ಹಂತವಾಗಿ ಪರಿಷ್ಕರಣೆ ಮಾಡದಿರುವುದಕ್ಕೆ ಕಾರಣ ಏನು?

ಶ್ರೀ ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈ ಒಂದು ನೀರಿನ ದರದ ಬಗ್ಗೆ ಈಗಾಗಲೇ ಕ್ಯಾಬಿನೆಟ್ ಸಬ್-ಕಮಿಟಿ ಕೂಡ ಇದ್ದು ಅದರಲ್ಲಿ ಬಹಳಷ್ಟು ಚರ್ಚೆಯನ್ನು ಮಾಡಿ ನಂತರ ನೀರಿನ ದರವನ್ನು ಏರಿಸಲಾಗಿದೆ. ನೀರಿನ ದರವನ್ನು ಏರಿಸತಕ್ಕ ವಿಚಾರ ಕೂಡ ಈಗ ಹಾಲಿ ಇರತಕ್ಕ ಪರಿಸ್ಥಿತಿಗೆ ನೀರಿನ ದರವನ್ನು ಏರಿಸಿರಲಿಲ್ಲ. 1988ರಲ್ಲಿ ಪರಿಷ್ಕರಣೆ ಮಾಡಿದಾಗ ಆ ಸಂದರ್ಭಕ್ಕೆ ಏನಾಗುತ್ತಿತ್ತೋ ಆ ಪ್ರಮಾಣದಲ್ಲಿ ಏರಿಸಿದೆ. ಅಲ್ಲಿಂದ ಇಲ್ಲಿಗೆ ಅಂದರೆ 1983ನೇ ಇಸವಿಯಿಂದ 2001ನೇ ಇಸವಿಯವರೆಗೆ ಯಾವುದೇ ನೀರಿನ ದರವನ್ನು ಏರಿಸಿಲ್ಲ. ಅಲ್ಲಿ ಸ್ವಾಭಾವಿಕವಾಗಿ ಯಾವುದೇ ರೀತಿಯಲ್ಲಿ ಒಂದೇ ಸಾರಿ ಜಂಪ್ ಆಗದೇ ಇರುವ ರೀತಿಯಲ್ಲಿ ಇದನ್ನು ಏರಿಸಲು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಹಾಗಾಗಿ ಈಗ ಕೊಟ್ಟಿರತಕ್ಕ ನೀರಿನ ದರ ಕೂಡ ಬಹಳಷ್ಟು ಒಂದೇ ಸಾರಿಗೆ ಏರಿಸಿರತಕ್ಕದ್ದು ಅಲ್ಲ. ಬೇರೆ ಹೊರ ರಾಜ್ಯಗಳಿಗೆ ಇದನ್ನು ತುಲನೆ ಮಾಡಿದರೆ ಇದು ಬಹಳ ಕಡಿಮೆ ಇದೆ. ಹಾಗಾಗಿ ಅದರಲ್ಲಿ ಯಾವುದೇ ತರಹದ ಒಂದು ಬಹಳ ದೊಡ್ಡ ವ್ಯತ್ಯಾಸ ಕೂಡ ನಾವು ಕಾಣುವುದಿಲ್ಲ.

ಉತ್ತರಹಳ್ಳಿ ಕ್ಷೇತ್ರದ ಈಜಿಪುರದಲ್ಲಿ ಒಳಚರಂಡಿ ವ್ಯವಸ್ಥೆ